ನಾವು ಸೂಕ್ತ ಕ್ರಮ ತೆಗೆದುಕೊಳ್ಳುವ ಕೆಲಸ ಮಾಡುತ್ತವೆ. ಅದರ ಬಗ್ಗೆ ಪೂರ್ಣ ವರದಿ ತರಿಸಿಕೊಂಡು ತಮಗೆ ಕಳುಹಿಸಿಕೊಟ್ಟು, ಯಾವರೀತಿಯ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚಿಸಿ, ನಾನು ತೀರ್ಮಾನಿಸಿದ್ದೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :- ನಾನು ಅವರ ಮಾತುಗಳನ್ನೆಲ್ಲವನ್ನು ಒಪ್ಪುತ್ತೇನೆ, ಸಾರ್ವಜನಿಕರೆದುರು ಆ ಅಧಿಕಾರಿ ಅಳತೆ ಮಾಡಿ ಇಷ್ಟು ಕ್ವಾರಿಗೆ ಕೊಟ್ಟಿದ್ದೇವೆ, ಅವರು ಇಷ್ಟನ್ನು ಮಾಡುತ್ತೇವೆಂದು ಹೇಳಿದರೆ ಜನಗಳು ಸುಮ್ಮನಾಗುತ್ತಾರೆ. ಆದರೆ ನಾಗರಕಲ್ಲು ಅನ್ನು ಒಡೆಯಲಿಕ್ಕೆ ಹೋದರೆ ಬಹಳ ಗಲಾಟೆಯಾಗುತ್ತದೆ. ಹೀಗಾಗಿ ಸಾರ್ವಜನಿಕರ ಎದುರು ಅಳತೆ ಮಾಡುವುದಕ್ಕೆ ಆದೇಶ ಕೊಡಿ.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಹಾಗೂ ಅಂತರ್ಜಲ ಸಚಿವರು) :- ನಾಗರಕಲ್ಲು ದೇವಾಲಯಕ್ಕೆ ಸಂಬಂಧಪಟ್ಟಿದ್ದರೆ ಯಾವುದೇ ಕಾರಣಕ್ಕೂ ಅದನ್ನು ಒಡೆದು ಮಾಡುವುದಕ್ಕಾಗುವುದಿಲ್ಲ. ಆಕಸ್ಮಿಕವಾಗಿ ಕಾನೂನು ಉಲ್ಲಂಘಿಸಿ ಕೊಟ್ಟಿದ್ದರೂ ಕೂಡ ಅದನ್ನು ನಿಷೇಧ ಮಾಡಿಸುತ್ತೇನೆ. ಕನಿಷ್ಟಪಕ್ಷ ಆ ಭಾಗಕ್ಕೆ ಅಂದರೆ ಸೇಫ್ಟಿ ಜೋನ್ ಏನು ಇರುತ್ತದೆ ಅದಕ್ಕೆ ರಿಜರ್ವ್ ಮಾಡಿ ನಿಷೇಧ ಮಾಡುವಂಥ ಕೆಲಸವನ್ನು ಮಾಡಿಸುತ್ತೇನೆ.

(ಐ) ವಿಷಯ : ಕಲಘಟಗಿ ಮತಕ್ಷೇತ್ರದಲ್ಲಿ ಸಹಾಯಕ ಇಂಜನಿಯರ್ ವರ್ಗಾವಣೆ ಆಗಿದ್ದರೂ ಚಾರ್ಜ್ ಕೊಡದೇ ಇರುವ ಬಗ್ಗೆ.

ಶ್ರೀ ಸಿದ್ಧನಗೌಡ ಈಶ್ವರಗೌಡ ಚಿಕ್ಕನಗೌಡ (ಕಲಘಟಗಿ) :- ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾನು 24ನೇ ತಾರೀಖಿನ ದಿನ ನನ್ನ ಕಲಘಟಗಿ ಮತ ಕ್ಷೇತ್ರದ ತಾಲ್ಲೂಕು ಪಂಚಾಯಿತಿಯ ಅಭಿವೃದ್ಧಿ ಕುಂಠಿತಗೊಂಡಿರುವುದರ ಸಲುವಾಗಿ ಒಂದು ಅರ್ಜಿಯನ್ನು ಕೊಟ್ಟಿರುತ್ತೇನೆ. ದಿನಾಂಕ 23-05-2002ರಂದು ನನ್ನ ಕ್ಷೇತ್ರದ ಸಹಾಯಕ ಇಂಜಿನಿಯರ್‌ರಾದ ಶ್ರೀಮೇಟಿ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಈ ಅಧಿಕಾರಿಯನ್ನು 2-6-2002ರ ತಾರೀಖಿನ ದಿನ ಕಾರ್ಯ ನಿಯುಕ್ತಗೊಳಿಸಲಾಗಿತ್ತು. 31-07-2002 ಇವತ್ತಿನವರೆಗೆ ಆ ಅಧಿಕಾರಿ ಅಲ್ಲಿ ಪ್ರಭಾರವನ್ನು ವಹಿಸಬೇಕಾದಂಥವರಿಗೆ ಇವತ್ತಿನವರೆಗೂ ವಹಿಸಿಕೊಟ್ಟಿಲ್ಲ. ಒಂದುವರೆ ವರ್ಷಗಳಿಂದ ನಿರಂತರವಾಗಿ ಈ ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಇರಬೇಕಾಗಿತ್ತು, ಒಂದು ವರ್ಷದ ಅವಧಿಯಲ್ಲಿ ಇಲ್ಲಿ 5 ಅಧಿಕಾರಿಗಳ ಬದಲಾವಣೆಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅಂದರೆ ಒಬ್ಬ ಸಹಾಯಕ ಇಂಜಿನಿಯರ್ ಯಾವ ಮಟ್ಟಕ್ಕೆ ಬೆಳೆದಿದ್ದಾನೆ ಎಂಬುದನ್ನು ನಾನು ಇವತ್ತು ತಮಗೆ ಕಳುಹಿಸಿಕೊಡುತ್ತೇನೆ. ಈ ಅಧಿಕಾರಿ ನನ್ನ ಮತಕ್ಷೇತ್ರದಲ್ಲಿ 14 ವರ್ಷಗಳಿಂದ ಒಂದೇ ಜಾಗದಲ್ಲಿ ನಿರಂತರವಾಗಿ ತನ್ನ ಅಧಿಕಾರವನ್ನು ಚಲಾಯಿಸುತ್ತಿದ್ದಾನೆ.

ಅಧ್ಯಕ್ಷರು :- ಡೀಟೈಲ್ ಆಗಿ ಹೇಳಬೇಡಿ, ಸಂಕ್ಷಿಪ್ತವಾಗಿ ಒಂದೆರಡು ವಾಕ್ಯಗಳಲ್ಲಿ ಹೇಳಿ.

ಶ್ರೀ ಸಿದ್ಧನಗೌಡ ಈಶ್ವರಗೌಡ ಚಿಕ್ಕನಗೌಡ :- ಅವನು ರಿಲೀವ್ ಮಾಡಿ ಒಂದು ತಿಂಗಳ ಮೇಲೆ ಮೂರು ದಿನಗಳಾದರೂ ಇವತ್ತಿನವರೆವಿಗೂ ಯಾರಿಗೆ ಪ್ರಭಾರ ವಹಿಸಿ ಕೊಡಬೇಕಾಗಿತ್ತೋ ಅವರಿಗೆ ಕೊಟ್ಟಿಲ್ಲ. ಎರಡೂ ತಿಂಗಳಿನಿಂದಲೂ ಅಲ್ಲಿ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ.

ಅಧ್ಯಕ್ಷರು :- ಒಂದು ಪ್ರಶ್ನೆ ಇದೆ, ಏನೆಂದರೆ, ಯಾವ ವ್ಯಕ್ತಿಗೆ ತನ್ನನ್ನು ಡಿಫೆಂಡ್ ಮಾಡಿಕೊಳ್ಳಲಿಕ್ಕೆ ಇಲ್ಲಿ ಬರುವುದಕ್ಕೆ ಆಗುವುದಿಲ್ಲವೋ ಆ ವ್ಯಕ್ತಿಯ ಬಗ್ಗೆ ನೀವು ಮೊದಲೇ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಒಬ್ಬರಿಗೆ ವರ್ಗಾವಣೆ ಆದೇಶ ಆಗಿದ್ದರೂ ಅವನು ಚಾರ್ಜ್ ಕೊಡುತ್ತಿಲ್ಲ, ರಿಲೀವ್ ಆಗಿ ಬೇರೆಯವರಿಗೆ ಚಾರ್ಜ್ ಕೊಟ್ಟು ಹೋಗಬೇಕಲ್ಲವೇ ಅದನ್ನು ಆ ವ್ಯಕ್ತಿ ಮಾಡುತ್ತಿಲ್ಲ.?

ಅಧ್ಯಕ್ಷರು :- ಏನಿದ್ದರೂ ಆ ವ್ಯಕ್ತಿಯ ಬಗ್ಗೆ ಮಾತನಾಡಬೇಕೆಂದರೆ..

ಶ್ರೀ ಜಗದೀಶ್ ಶೆಟ್ಟರ್ :- ವ್ಯಕ್ತಿಯ ಬಗ್ಗೆ ಆಪಾದನೆ ಮಾಡುತ್ತಿಲ್ಲ, 17 ವರ್ಷಗಳಿಂದ ಆತ ಅಲ್ಲಿಯೇ ಇದ್ದ, ಟ್ರಾನ್ಸ್‌ಫರ್ ಆರ್ಡರ್ ಆದಮೇಲೂ ರಿಲೀವ್ ಆಗಲಿಲ್ಲ, ಹೊಸದಾಗಿ ಚಾರ್ಜ್ ತೆಗೆದುಕೊಳ್ಳತಕ್ಕಂಥವರಿಗೆ ಚಾರ್ಜ್ ಕೂಡ ಕೊಡುತ್ತಿಲ್ಲ. ಹೀಗಾಗಿ ತಮ್ಮಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ನಿಂತಿವೆ, ಅದಕ್ಕಾಗಿ ಅವರು ಇಲ್ಲಿ ಕೇಳುತ್ತಿದ್ದಾರೆ.

ಅಧ್ಯಕ್ಷರು :- ಅಷ್ಟೇ ತಾನೇ ವಿಷಯ; ನಾನು ಏನು ಹೇಳಿದೆ ಎಂದರೆ, ಡೀಟೇಲ್ ಆಗಿ ಹೇಳುವುದು ಬೇಡ, ಸಂಕ್ಷಿಪ್ತವಾಗಿ ಹೇಳಲಿ ಎಂದು ಹೇಳಿದೆ.

ಶ್ರೀ ಸಿದ್ದನಗೌಡ ಈಶ್ವರಗೌಡ ಚಿಕ್ಕನಗೌಡ :- ನನ್ನ ಅಭಿಪ್ರಾಯವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು :- ವೆರಿಗುಡ್. ತಾವು ನನಗೆ ಕಳುಹಿಸಿಕೊಡಿ. ಅದನ್ನು ನಾನು ಜಿಲ್ಲಾ ಪಂಚಾಯತ್ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿದ್ದನಗೌಡ ಈಶ್ವರಗೌಡ ಚಿಕ್ಕನಗೌಡ :- ಒಬ್ಬ ಅಧಿಕಾರಿಯನ್ನು ಯಾವ ಮಟ್ಟದಲ್ಲಿ ಇವರು ಇಟ್ಟುಕೊಂಡಿದ್ದಾರೆನ್ನುವ ಬಗ್ಗೆ ಉದಾಹರಣೆಯನ್ನು ತಮಗೆ ಹೇಳಬಯಸತ್ತೇನೆ. ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾಧಿಕಾರಿಗಳು ಇವನನ್ನು ರಿಲೀವ್ ಮಾಡಿದರೆ, ಸಿಇಒ ಧಾರವಾಡ, ಸಿಇಒ ಕಾರವಾರ, ರಿಲೀವ್ ಮಾಡಿದ ಲೆಟರ್ ಅನ್ನು ಸ್ವತಃ ಹೋಗಿ ವಾಪಸ್ ತನ್ನ ಕೈಯಲ್ಲಿ ಪಡೆದುಕೊಂಡು ಬಂದಿದ್ದಾನೆ. ತಾಲ್ಲೂಕಿನಲ್ಲಿ ಯಾರೇ ಕೇಳಿದರೂ, ನಾನು ರಿಲೀವ್ ಆಗಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾನೆ, ಆದರೆ ಅಲ್ಲಿ ಕೆಲಸಗಳು ಕುಂಠಿತಗೊಂಡಿವೆ. 27 ಗ್ರಾಮ ಪಂಚಾಯಿತಿಗಳಲ್ಲಿ 13 ಗ್ರಾಮ ಪಂಚಾಯಿತಿಗಳನ್ನು ಒಬ್ಬನಿಗೆ ಕೊಟ್ಟಿದ್ದಾನೆ. ಅಲ್ಲಿ ಆಶ್ರಯ ಮನೆ ಕಟ್ಟುವುದಕ್ಕೆ ಇವತ್ತಿನವರೆಗೆ ದುಡ್ಡು ಬಿಡುಗಡೆ ಮಾಡುತ್ತಿಲ್ಲ. ಅಲ್ಲಿರುವ ಜನಗಳ ಪರಿಸ್ಥಿತಿ ಏನಾಗಬೇಕು? ಮಳೆಗಾಲ ಪ್ರಾರಂಭವಾಗಿದೆ, ಮನೆಗಳು ಮುಗಿಯುವ ಹಂತಕ್ಕೆ ಬಂದಿವೆ, ಕಳಪೆ ಇಟ್ಟಿಗೆಯಿಂದ ಕಟ್ಟಲಾಗುತ್ತದೆ, ತನ್ನದೇ ಆದ ಇಟ್ಟಂಗಿಬಟ್ಟಿ ಇದೆ, ಒಬ್ಬ ಸಹಾಯಕ ಇಂಜನಿಯರ್ ಇದ್ದು, 13 ಜನ ಕಾರ್ಪೊರೇಟರ್ಸ್ ಇದ್ದು 4 ಜನ ಗುತ್ತಿಗೆದಾರರು ಇದ್ದಾರೆ. ತನ್ನ ಇಟ್ಟಂಗಿಬಟ್ಟಿಗೆ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗುತ್ತಾನೆ.

ಅಧ್ಯಕ್ಷರು :- ಇವತ್ತು ಶೂನ್ಯವೇಳೆಯಲ್ಲಿ ಏಳು ಆಯಿತು, ಕಾರಣ ಏನೆಂದರೆ, ನಿನ್ನೆ ಮೊನ್ನೆ ಮೂರು ದಿವಸಗಳಿಂದ ಶೂನ್ಯವೇಳೆ ಇಲ್ಲದಿರುವುದರಿಂದ ಇವತ್ತು ಸ್ವಲ್ಪ ಜಾಸ್ತಿಯಾಗಿದೆ. ಆದ್ದರಿಂದ, ತಾವು ಬೇಗ ಮುಗಿಸಿ, ಇನ್ನು ಬೇರೆಯವರು ಮಾತನಾಡುವವರು ಇದ್ದಾರೆ, ಇನ್ನು ನಮಗೆ 6 ದಿವಸಗಳಿದೆ. 5.30 ಶೂನ್ಯವೇಳೆಯಲ್ಲಿ ದಿನಕ್ಕೆ ಐದರಂತೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ :- ಅವರು ಏನು ಹೇಳುತ್ತಾರೆಂದರೆ, ಆತನನ್ನು ರಿಲೀವ್ ಮಾಡಿಸಿ ಮತ್ತೊಬ್ಬರು ಚಾರ್ಜ್ ತೆಗೆದುಕೊಳ್ಳಲಿ ಎಂದು ಸರ್ಕಾರ ತಕ್ಷಣ ಅದನ್ನು ಮಾಡಬಹುದಲ್ಲವೆ? ಅದರಲ್ಲಿ ಆತ ರಾಜಕೀಯ ಮಾಡುತ್ತಿದ್ದಾನೆ. ಸರ್ಕಾರ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎನ್. ಗಡ್ಡಿ (ಅರಣ್ಯ ರಾಜ್ಯ ಸಚಿವರು) :- ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಅಧಿಕಾರಿಯನ್ನು ರಿಲೀವ್ ಮಾಡಿ ಎಂದು.

ಅಧ್ಯಕ್ಷರು :- ಸೀನಿಯರ್ ಮಂತ್ರಿಗಳು ಉತ್ತರ ಹೇಳುತ್ತಾರೆ, ನೀವು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ :- ಮಾನ್ಯ ಸದಸ್ಯರಾದ ಚಿಕ್ಕನಗೌಡ್ರು ನಮ್ಮ ಹತ್ತಿರ ಬರುತ್ತಾರೆ, ಅವರಿಗೆ ಬೇಕಾದ ಇಂಜಿನಿಯರ್‌ರವರು ಅವರ ಕ್ಷೇತ್ರಕ್ಕೆ ಕೊಟ್ಟಿದ್ದೇನೆ, ಅವರಿಗೂ ಈ ವಿಷಯ ಗೊತ್ತಿರಬಹುದು. ನಮ್ಮ ಶಾಸಕರು ಬಂದು ಅವರಿಗೆ ಏಕೆ ಕೊಟ್ಟಿದ್ದೀರಿ ಎಂದರೆ, ಅದಕ್ಕೆ ನಾನು ಇದರಲ್ಲಿ ತಾರತಮ್ಯವೇನೂ ಇಲ್ಲ. ಅವರು ಯಾವುದೇ ಪಕ್ಷದ ಸದಸ್ಯರಾಗಿದ್ದರೂ ಜನಪ್ರತಿನಿಧಿಗಳೆಂದು ಮನ್ನಣೆ ಕೊಟ್ಟಿದ್ದೇನೆ. ಈ ವಿಚಾರ ಈಗ ಬಂದಾಗ ನನಗೆ ಗೊತ್ತಾಗಿದೆ, ಏನಾದರೂ ಆಗಿದ್ದರೆ ಇವತ್ತೇ ನನ್ನ ಹತ್ತಿರ ಬನ್ನಿ, ನಾನು ಆದೇಶ ಮಾಡಿ ಸಂಬಂಧಪಟ್ಟವರಿಗೆ ಹೇಳಿ ತಕ್ಷಣ ಕ್ರಮ ಕೈಗೊಳ್ಳುತ್ತೇನೆ. ಶೂನ್ಯವೇಳೆಯಲ್ಲಿ ಪ್ರಸಾಪ ಮಾಡುವುದಕ್ಕಿಂತಲೂ ಮಾನ್ಯ ಸದಸ್ಯರು ಮಂತ್ರಿಗಳಿಗೆ ಖುದ್ದಾಗಿ ಭೇಟಿಯಾದರೆ ಪರಿಹಾರವಾಗುವುದು ಇದೆ. ನನಗೆ ಇದರ ಬಗ್ಗೆ ಗೊತ್ತಿಲ್ಲ, ಇದಕ್ಕೆ ಸಂಬಂಧಪಟ್ಟವರು ಯಾರು ಮಾಡಿದ್ದಾರೆ, ಏನು ಮಾಡಿದ್ದಾರೆ ಎಂಬುದನ್ನು ನೋಡಿ ಸಂಬಂಧಪಟ್ಟವರಿಗೆ ಕ್ರಮ ತೆಗೆದುಕೊಳ್ಳಲು ಈಗಲೇ ಸೂಚಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಚಿಕ್ಕನಗೌಡ್ರೆ ನಿಮ್ಮ ಕೆಲಸವಾಯಿತು ಬಿಡಿ, ಅವರು ಇವತ್ತೇ ಬನ್ನಿ ಎಂದು ಹೇಳಿದ್ದಾರೆ. ಅವರಿಗೆ ಕಳುಹಿಸಿಕೊಡಿ.

ಶ್ರೀ ಎ. ನಾರಾಯಣಸ್ವಾಮಿ :- ಮಾನ್ಯ ಅಧ್ಯಕ್ಷರೆ, ನಾನು ಒಂದು ವಾರದ ಹಿಂದೆ ಕೊಟ್ಟಿದ್ದೇನೆ.

ಅಧ್ಯಕ್ಷರು :- ಸ್ವಾಮಿ, ಇವತ್ತು ನಾನು ಏಳು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ, ಇದರ ಜೊತೆಗೆ ಗಮನ ಸೆಳೆಯುವ ಸೂಚನೆಗಳು ಇವೆ, ಬಿಲ್ಸ್ ಇವೆ, ಪ್ರತಿ ದಿನ 5-6 ಅಲೋ ಮಾಡುತ್ತೇನೆ, 6 ದಿವಸಗಳಲ್ಲಿ 6X6-36 ಶೂನ್ಯವೇಳೆಯಲ್ಲಿ ತೆಗೆದುಕೊಳ್ಳಬಹುದು. ಏಕೆ ಅವಸರ ಮಾಡುತ್ತೀರಿ? ಮಾನ್ಯ ಅಶೋಕ್‌ರವರೇ, ನಾಳೆ ನಿಮಗೆ ಅವಕಾಶ ಕೊಡುತ್ತೇನೆ. ಈಗಾಗಲೇ ಒಂದೊಂದು ಪಾರ್ಟಿಗೆ ಎರಡೆರಡು ಕೊಟ್ಟಿದ್ದೇನೆ, ಅವರಿಗೆ ಕೊಟ್ಟಿಲ್ಲ, ಇವತ್ತು ಯಾರ್ಯಾರು ಎದ್ದು ನಿಂತಿದ್ದೀರಿ ನಾಳೆ ಅವರಿಗೆಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ :- ನಾಳೆಯಾದರೂ ನನಗೆ ಗಮನ ಸೆಳೆಯುವ ಸೂಚನೆಯಲ್ಲಿ ಅವಕಾಶ ಕೊಡಬೇಕು.

ಅಧ್ಯಕ್ಷರು :- ಆಗಬಹುದು. ಈಗ ಗಮನ ಸೆಳೆಯುವ ಸೂಚನೆಗಳು.

8. ಗಮನ ಸೆಳೆಯುವ ಸೂಚನೆಗಳು

(ಅ) ಮಂಗಳೂರು ವಿಮಾನ ನಿಲ್ದಾಣಕ್ಕೆ ಜಮೀನು ನೀಡಿದವರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ (ಸುರತ್ಕಲ್) :- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನವಮಂಗಳೂರು ಬಂದರು, ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್,